

# ಪಾಕಿಸ್ತಾನದ ಜನಪದ ಧ್ವನಿ

■ ಪ್ರವೀಣ ಕುಲಕರ್ಣಿ

ಸಂಗೀತ ಕ್ಷೇತ್ರಕ್ಕೆ ಪಾಕಿಸ್ತಾನ ಸಹ ದೊಡ್ಡ ಕಾಣಿಕೆಯನ್ನೇ ನೀಡುತ್ತಾ ಬಂದಿದೆ. ಜಗತ್ತಿನಲ್ಲಿ ಹಾಗೆ ಪಾಕಿಸ್ತಾನದ ದೊಡ್ಡ ಕಾಣಿಕೆಗಳಾಗಿ ಮಿಂಚಿದ ವರ್ತಮಾನದ ಇಬ್ಬರು ಸಂಗೀತ ದಿಗ್ಗಜರಲ್ಲಿ ಒಬ್ಬರು ಅಬೀದಾ ಪರ್ವಿನ್, ಮತ್ತೊಬ್ಬರು ನಸೀಬೊ ಲಾಲ್. ಇಬ್ಬರೂ ಸೇರಿ ಹಾಡಿದ ಝೂಮ್ ಝೂಮ್ ಹಾಡು ಈಗ ಜಗತ್ತಿನ ಸಂಗೀತಪ್ರಿಯರ ಹೃದಯ ಗೀತೆಯಾಗಿ ಮಾರ್ಪಾಡಾಗಿದೆ.

ಪಾಕಿಸ್ತಾನದ ಜನಪದ ಗಾಯಕಿಯಾದ ನಸೀಬೊ ಲಾಲ್, ಭಾರತ–ಪಾಕ್ ಗಡಿಯಲ್ಲಿ ಮಾತ್ರ ಕೇಳಲು ಸಿಗುವ ಸಾರೈಕಿ, ಪಂಜಾಬಿ ಅಲ್ಲದೆ ಉರ್ದು ಮತ್ತು ಮಾರ್ವಾರಿ ಭಾಷೆಗಳಲ್ಲಿಯೂ ಹಾಡುತ್ತಾರೆ. ತಾರಕ ಸ್ವರದ ಹಾಡುಗಳಿಗೆ ಹೆಸರಾಗಿರುವ ನಸೀಬೊ, ಮೈಕ್ ಮುಂದೆ ತನ್ಮಯರಾಗಿ ಹಾಡುತ್ತಾ ಕುಳಿತರೆ, ಕೇಳುಗರೆಲ್ಲ ಮಂತ್ರಮುಗ್ಧರಾಗಿ ಆ ಹಾಡಿನ ವಶವಾಗಿ ಬಿಡುತ್ತಾರೆ. ಪಾಕಿಸ್ತಾನದ ಸಾಂಪ್ರದಾಯಿಕ ಸಂಗೀತೋತ್ಸವಗಳ ಅಚ್ಚುಮೆಚ್ಚಿನ ಗಾಯಕಿಯಾದ ನಸೀಬೊ, ವೈಯಕ್ತಿಕ ಬದುಕಿನಲ್ಲಿ ಸಾಕಷ್ಟು ನೋವುಂಡವರು. ತಾರಕ ಸ್ವರದ ಗಾಯನದಿಂದ ಮೆಚ್ಚುಗೆ ಗಳಿಸಿದಷ್ಟೇ ಕುಹಕದ ಮಾತುಗಳನ್ನೂ ಕೇಳಿದವರು. ಆದರೆ, ಹಾಡಲು ಕುಳಿತರೆ ಎಲ್ಲವನ್ನೂ ಮರೆತುಬಿಡುವರು. ಝೂಮ್ ಝೂಮ್ ಹಾಡಿನ ವಿಷಯವಾಗಿಯೇ ಹೇಳುವುದಾದರೆ ನಸೀಬೊ ಅವರ ಮುಂದೆ ಅಬೀದಾ ಅವರಂತಹ ಪ್ರಚಂಡ ಗಾಯಕಿಯೇ ಮಂಕಾದಂತೆ ಭಾಸವಾಗುತ್ತದೆ.

ಒಂದು ಕಾಲದಲ್ಲಿ ಹಣಕಾಸಿನ ತೀವ್ರ ಮುಗ್ಗಟ್ಟು ಎದುರಿಸಿದ್ದ ಈ ಗಾಯಕಿ, ಹಣಕ್ಕಾಗಿ ಎಂತಹ ಕಾರ್ಯಕ್ರಮಗಳನ್ನೂ ಒಪ್ಪಿಕೊಂಡು ಬಿಡುತ್ತಾರೆ ಎಂಬ ಆರೋಪವನ್ನೂ ಎದುರಿಸಿದ್ದುಂಟು. ಹಾಗೆ ಬಯ್ಯುವವರು ನನ್ನ ಮನೆಯ ಆರ್ಥಿಕ ಸಂಕಷ್ಟ ಬಗೆಹರಿಸುವರೇ ಎಂದು ನಸೀಬೊ ಪ್ರಶ್ನಿಸಿದ್ದುಂಟು.

ಪಾಕಿಸ್ತಾನ ಸೂಪರ್ ಲೀಗ್‌ನ ಗೀತೆಯಾಗಿ ಅವರು ಗ್ರೂವ್ ಮೇರಾ ಹಾಡಿದ್ದರು. ಅದು ಆ ದೇಶದ ಕ್ರೀಡಾತಾರೆಗಳ ಪಾಲಿಗೆ ದೇಶಭಕ್ತಿ ಗೀತೆಯಾಗಿ ಪರಿಣಮಿಸಿತ್ತು. ದೊಡ್ಡ ಸ್ಟಾರ್ ಆಗಿದ್ದರೂ ನಸೀಬೊ ತುಂಬಾ ಸರಳ ವ್ಯಕ್ತಿ. ಪಾಕಿಸ್ತಾನದಂತಹ ಸಂಪ್ರದಾಯನಿಷ್ಠ ದೇಶದಲ್ಲಿ ಸಂಗೀತಗಾರ್ತಿಯಾಗಿ ಬೆಳೆಯುವುದು ಅಷ್ಟು ಸುಲಭದ ಹಾದಿಯಾಗಿರಲಿಲ್ಲ. ಆದರೆ, ಎಲ್ಲ ಅಡೆತಡೆ ಮೀರಿ ಅವರು ಮಾಡಿದ ಸಾಧನೆ, ಮೂಡಿಸಿದ ಛಾಪು ಬೆರಗುಗೊಳಿಸುವಂಥದ್ದು. ರಂಗಭೂಮಿಯಲ್ಲಿ ತಮ್ಮದೇ ಧ್ವನಿಯ ನಿನಾದದ ಅಲೆ ಎಬ್ಬಿಸಿದ ಅವರು, ಸಿನಿಮಾ ಗೀತೆಗಳನ್ನೂ ಹಾಡಿದ್ದಾರೆ. ದಶಕಗಳ ಈ ಸಂಗೀತ ಯಾತ್ರೆಯಲ್ಲಿ ನೀವು ಗುರುತಿಸಿದ ಮಹತ್ತರ ಬದಲಾವಣೆ ಏನು ಎಂದು ಅವರನ್ನು ಕೇಳಿ ನೋಡಿ. ಅವರು ಉತ್ತರಿಸುತ್ತಾರೆ: ‘ಹಿಂದೆ ದೊಡ್ಡ ದೊಡ್ಡ ಸಂಗೀತಗಾರರು ಹಾಡುವುದನ್ನು ಆಸ್ವಾದಿಸಲು ಕಛೇರಿಗೇ ತೆರಳಬೇಕಿತ್ತು. ಈಗ ಮೊಬೈಲ್ ಒಂದಿದ್ದರೆ ಸಾಕು, ಜಗತ್ತಿನ ಯಾವುದೇ ಮೂಲೆಯಲ್ಲಿ ಕುಳಿತು, ಆ ಹಾಡುಗಳನ್ನು ಕೇಳಬಹುದು’ ಎಂದು. ಲೈವ್ ಕಛೇರಿಯಲ್ಲಿ ಕೇಳುವ ಮಜಾ ಇನ್ನು ಯಾವುದರಲ್ಲೂ ಸಿಗಲ್ಲ ಬಿಡಿ ಎಂದು ನಗುತ್ತಾರೆ.

ನಸೀಬೊ ಪಾಕಿಸ್ತಾನದಲ್ಲಿ ಸ್ತ್ರೀಸ್ವಾತಂತ್ರ್ಯದ ಧ್ವನಿಯೂ ಎನಿಸಿದ್ದಾರೆ. ‘ನಾನು ಸಂಗೀತ ಕ್ಷೇತ್ರದಲ್ಲಿ ಪದಾರ್ಪಣೆ ಮಾಡಿದ ಸಂದರ್ಭದಲ್ಲಿ ಲಿಂಗ ತಾರತಮ್ಯ ಹೆಚ್ಚಾಗಿತ್ತು. ಆ ಸವಾಲನ್ನು ಮೆಟ್ಟಿ ನಾವು ಗಟ್ಟಿಯಾದ ಹೆಜ್ಜೆಯೂರಬೇಕಿತ್ತು. ಈಗ ಸಮಾಜದಲ್ಲಿ ಸಾಕಷ್ಟು ಬದಲಾವಣೆಯಾಗಿದೆ. ಮಹಿಳೆಯರಿಗೆ ಅವಕಾಶಗಳು ಸಿಗುತ್ತಿವೆ. ಈ ಬದಲಾವಣೆ ನೋಡಿದಾಗ ಮನಸ್ಸಿಗೆ ಏನೋ ನೆಮ್ಮದಿ’ ಎನ್ನುತ್ತಾರೆ.

ತಮ್ಮ ಸಮಕಾಲೀನ ಗಾಯಕಿಯರ ಜತೆಗಾಗಲಿ, ಹೊಸ ತಲೆಮಾರಿನ ಗಾಯಕಿಯರ ಜತೆಗಾಗಲಿ ಹೋಲಿಕೆ ಮಾಡುವುದನ್ನು ಅವರು ಇಷ್ಟಪಡುವುದಿಲ್ಲ. ಪ್ರತಿಯೊಬ್ಬ ಗಾಯಕಿಗೂ ತನ್ನದೇ ವಿಶಿಷ್ಟ ಪ್ರತಿಭೆ, ಧ್ವನಿ ಇರುತ್ತದೆ. ಅಂತಹ ಅನನ್ಯ ಗುಣಲಕ್ಷಣಗಳನ್ನು ಹೋಲಿಕೆ ಮಾಡುವುದು ಅಸಾಧ್ಯದ ಕೆಲಸ. ಹಾಗೆ ಮಾಡಬಾರದು ಕೂಡ ಎಂದು ಖಡಾಖಂಡಿತವಾಗಿ ಹೇಳುತ್ತಾರೆ.

ಡಿಜಿಟಲ್ ಕಾಲಘಟ್ಟದಲ್ಲಿ ಯಶಸ್ವಿ ಗಾಯಕರಾಗುವುದು ಸುಲಭ. ಬ್ಲಾಗರ್, ಯೂಟ್ಯೂಬರ್, ವ್ಲೊಗರ್ ಆದರೆ ಸಾಕು. ಜಗತ್ತಿನಾದ್ಯಂತ ದಿನ ಬೆಳಗಾದರೆ ದೊಡ್ಡ ಹೆಸರು ಮಾಡಬಹುದು. ಆದರೆ, ನಮ್ಮ ಆರಂಭದ ದಿನಗಳು ಬೇರೆಯೇ ಆಗಿದ್ದವು ಎಂದು ನಸೀಬೊ ಹೇಳುತ್ತಾರೆ. ಇಂದು ನಾನು ಏನಾಗಿರುವೆನೋ ಅದಕ್ಕೆಲ್ಲ ನನ್ನ ಕೇಳುಗವರ್ಗವೇ ಕಾರಣ ಎನ್ನುವ ವಿನೀತಭಾವವನ್ನೂ ಅವರು ಪ್ರದರ್ಶಿಸುತ್ತಾರೆ. ಸೂಫಿ ಸಂಗೀತವನ್ನು ಅವರ ಧ್ವನಿಯಲ್ಲಿ ಕೇಳುವ ಆನಂದವೇ ಬೇರೆ. ಜಗತ್ತಿನ ಶ್ರೇಷ್ಠ ಸೂಫಿ ಸಂಗೀತಗಾರರಲ್ಲಿ ಅವರು ಒಬ್ಬರಾಗಿದ್ದಾರೆ. ಅಂದಹಾಗೆ, ದೇಶದ, ದ್ವೇಷದ ಗಡಿಯನ್ನು ಮೀರಿ ಭಾರತದಲ್ಲೂ ಅವರು ಅಭಿಮಾನಿಗಳನ್ನು ಹೊಂದಿದ್ದಾರೆ. ಝೂಮ್ ಹಾಡು ಭಾರತದಲ್ಲೇ ಹೆಚ್ಚು ಮೊಳಗುತ್ತಿದೆ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65